ತಿನ್ನುತ್ತಾ, ತೋಟದಲ್ಲಿ ಎಳೆನೀರು ಕುಡಿಯುತ್ತಾ ಕಾಲ ಕಳೆಯುತ್ತಿದ್ದ. ಶಂಕರನಿಗೆ ಪಾರ್ವತಜ್ಜಿಯ ಊರಿಗೆ ಹೋಗುವುದೆಂದರೆ ಸ್ವರ್ಗಕ್ಕೆ ಹೋದಂತೆ. ಪಾರ್ವತಜ್ಜಿ ತನ್ನ ತವರು ಮನೆಯಿಂದ ತಂದು ನೆಟ್ಟಿದ್ದ ಮಾವಿನ ಸಸಿ, ಈಗ ಹೆಮ್ಮರವಾಗಿ ಬೆಳೆದು ನಿಂತಿತ್ತು. ಅದೇಕೋ ಹಿಂದೆ ಐದಾರು ಸಸಿಗಳನ್ನು ನೆಟ್ಟರೂ ಎಲ್ಲವೂ ಒಣಗಿಹೋಗಿದ್ದವು. ಆದರೆ ತವರೂರಿನಿಂದ ತಂದ ಇದೊಂದು ಮಾವಿನ ಸಸಿ ಮಾತ್ರ ಚೆನ್ನಾಗಿ ಹೆಮ್ಮರವಾಗಿ ಬೆಳೆದುನಿಂತಿತ್ತು. ಬೇಸಿಗೆಯಲ್ಲಂತೂ ಆ ಮರದಲ್ಲಿ ಹಣ್ಣುಗಳು ಯಥೇಚ್ಚವಾಗಿ ಬಿಡುತ್ತಿದ್ದವು. ಆ ಮಾವಿನ ಹಣ್ಣುಗಳ ರುಚಿಯಂತೂ ಬಹಳ ವಿಶೇಷವಾಗಿದ್ದು, ದೊಡ್ಡ ಮಾವಿನ ಮರ ಎಂದೇ ಸುತ್ತಮುತ್ತ ಹೆಸರಾಗಿತ್ತು. ಆ ಮರದ ಮಾವಿನ ಹಣ್ಣುಗಳೆಂದರೆ ಶಂಕರನಿಗೆ ಬಹಳ ಇಷ್ಟ. ಮಾವಿನ ಹಣ್ಣಿನ ಕಾಲದಲ್ಲಿ ಕದಿಯುವವರಿಂದ ಹಣ್ಣುಗಳನ್ನು ರಕ್ಷಣೆ ಮಾಡುವುದೇ ಒಂದು ಸಮಸ್ಯೆಯಾಗಿತ್ತು. ಅದಕ್ಕೆ ಹಗಲೆಲ್ಲಾ ಪಾರ್ವತಜ್ಜಿಯು ಅಲ್ಲೇ ಕಾವಲು ಕಾಯುತ್ತಿದ್ದಳು. ಶಂಕರನೂ ಕೆಲವೊಮ್ಮೆ ಅಜ್ಜಿಯ ಜೊತೆಯಲ್ಲಿಯೇ ಕುಳಿತುಕೊಳ್ಳುತ್ತಿದ್ದ. ಆಗೆಲ್ಲಾ ಪಾರ್ವತಜ್ಜಿ ತಾನು ಈ ಮನೆಗೆ ಸೊಸೆಯಾಗಿ ಬಂದಾಗ ಜೀವನದಲ್ಲಿ ಪಟ್ಟ ಕಷ್ಟಗಳು, ಅವುಗಳನ್ನು ಬಗೆಹರಿಸಿದ ರೀತಿ ಮತ್ತು ತಾನೊಬ್ಬಳೇ ಪುಟ್ಟಮಕ್ಕಳನ್ನು ಕಟ್ಟಿಕೊಂಡು ವ್ಯವಸಾಯ ಮಾಡಿ, ಸಾಕಿ ದೊಡ್ಡವರನ್ನಾಗಿ ಮಾಡಿದ್ದು-ಹೀಗೆ ಎಲ್ಲವನ್ನೂ ಶಂಕರನಿಗೆ ವಿವರಿಸುತ್ತಿದ್ದಳು.

'ಅಜ್ಜಿ, ನಿನಗೆ ತಾತನ ಸಹಾಯವೇನು ಇರುತ್ತಿರಲಿಲ್ಲವೇ?' ಎಂದು ಶಂಕರನು ಪ್ರಶ್ನಿಸಿದರೆ, 'ನಿಮ್ಮ ತಾತ ಹೊಲದಲ್ಲಿ ಆಳಿನಂತೆ ಮೈಮುರಿದು ಕೆಲಸವೇನೋ ಮಾಡುತ್ತಿದ್ದ. ಆದರೆ ಸ್ವಲ್ಪ ದಾರಿ ತಪ್ಪಿದ್ದ. ಒಬ್ಬಳು ಸೂಳೆಯನ್ನು ಇಟ್ಕೊಂಡಿದ್ದ. ಅವಳು ಕೆಲಸದವಳು ಅಂತ ಹೇಳೋಕೆ ಆಗ್ತಿರಲಿಲ್ಲ, ಹಾಗಿದ್ದಳು ಆ ಸುಂದರಿ. ನಿನ್ನ ಅಜ್ಜನಿಂದ ಅವಳನ್ನು ದೂರ ಮಾಡಲು ನಂಗೆ ಸಾಕಾಯ್ತು ಕಣಪ್ಪ. ನಿಮ್ಮ ತಾತ ಏನೂ ಕಡಿಮೆ ಆಟ ಆಡಿಲ್ಲ. ನಾನು ಅವರಿಬ್ಬರನ್ನು ಉಪಾಯ ಮಾಡಿ ಬೇರೆ ಮಾಡಿದೆ. ಇಲ್ಲಾಂದ್ರೆ ಈ ತೋಟ, ಹೊಲವನ್ನೆಲ್ಲಾ ನಿಮ್ಮ ತಾತ ಅವಳಿಗೆ ಬರೆದು ಬಿಡುತ್ತಿದ್ದ' ಎಂದು ಕಣ್ಣು ಮಿಟುಕಿಸಿ ನಗುತ್ತಿದ್ದಳು.

ಪಾರ್ವತಜ್ಜಿಯ ಮುಖದಲ್ಲಿ ಸ್ವಲ್ಪ ಜಾಸ್ತಿಯೇ ಎನಿಸುವಷ್ಟು ಸುಕ್ಕುಗಳಿದ್ದವು. ಒಮ್ಮೆ ಶಂಕರನು, 'ಯಾಕಜ್ಜಿ ನಿನಗೆ ಬೇರೆ ಯಾರಿಗೂ ಇರದಷ್ಟು ಮುಖದಲ್ಲಿ ಸುಕ್ಕುಗಳು' ಎಂದು ಪ್ರಶ್ನಿಸಿದ್ದಕ್ಕೆ, 'ವಯಸ್ಸಾಗುತ್ತಾ ಬಂದಂತೆ, ಕಷ್ಟಗಳು ಜಾಸ್ತಿ ಆಗ್ತಾ ಆಗ್ತಾ ಮುಖದಲ್ಲಿ ಸುಕ್ಕುಗಳು ಕೂಡ ಜಾಸ್ತಿ ಆಗ್ತಾ ಹೋಗ್ತವೆ. ನಾನು ಎಷ್ಟೆಲ್ಲಾ ಕಷ್ಟ, ಸಮಸ್ಯೆಗಳನ್ನು ಎದುರಿಸಿ ಗೆದ್ದಿದ್ದೇನೋ, ಮುಖದಲ್ಲಿಯು ಅಷ್ಟು ಸುಕ್ಕುಗಳು ಆಗಿವೆ' ಎಂದು ಹೇಳುತ್ತಿದ್ದಳು. ಮುಂದೆ ಕಾಲೇಜಿಗೆ ಹೋಗಿ ವಿಜ್ಞಾನದ ವಿದ್ಯಾರ್ಥಿಯಾಗಿ ಸುಕ್ಕುಗಳ ಬಗ್ಗೆ ವೈಜ್ಞಾನಿಕ ಕಾರಣಗಳನ್ನು ತಿಳಿದುಕೊಂಡ ಮೇಲೂ ಶಂಕರನಿಗೆ ಅದೇಕೋ ಅಜ್ಜಿ ಹೇಳಿದ್ದ ಸುಕ್ಕುಗಳ ಥಿಯರಿ ಮನಸ್ಸಿನಲ್ಲಿ ಕುಳಿತುಬಿಟ್ಟಿತು. ಪಾರ್ವತಜ್ಜಿಯು ಯಾರೊಂದಿಗಾದರೂ ಜಗಳ ಮಾಡಿಕೊಂಡರೆ ಮುನಿಸಿಕೊಂಡು ಬಂದು ಆ ಮಾವಿನ ಮರದ ಕೆಳಗೆ ಕುಳಿತುಕೊಳ್ಳುತ್ತಿದ್ದಳು. ಆ ಮರದ ಕೆಳಗೆ ಕುಳಿತರೆ ಆಕೆಗೇನೋ ಒಂದು ರೀತಿಯ ಸಮಾಧಾನವಾಗುತ್ತಿತ್ತು. ಆ ಮಾವಿನ ಸಸಿಯನ್ನು ತವರಿನಿಂದ ತಂದು ಹಾಕಿದ್ದಕ್ಕೋ ಅಥವಾ ನೀರಿಲ್ಲದ ಬರಗಾಲದ ಸಮಯದಲ್ಲಿ ಮನೆಯಿಂದ ನೀರು ಹಾಕಿ ಬೆಳೆಸಿದ್ದಕ್ಕೋ ಪಾರ್ವತಜ್ಜಿಗೆ ಆ ಮಾವಿನ ಮರದ ಬಗ್ಗೆ ವಿಶೇಷ ಪ್ರೀತಿಯಿತ್ತು. ಮುನಿಸಿಕೊಂಡು ಮಾವಿನ ಮರದ ಕೆಳಗೆ ಬಂದು ಕುಳಿತಿರುತ್ತಿದ್ದ ಪಾರ್ವತಜ್ಜಿಯನ್ನು ಮನೆಯಿಂದ ಮಗನೋ, ಮೊಮ್ಮಕ್ಕಳೋ ಬಂದು ಸಮಾಧಾನ ಮಾಡಿ ಊಟಕ್ಕೆ ಕರೆದುಕೊಂಡು ಹೋಗಬೇಕಿತ್ತು.

ಹೀಗಿರುವಾಗ ಒಮ್ಮೆ ಹೊಲದಲ್ಲಿ ಕೂಲಿಯವರೊಂದಿಗೆ ಮಾತನಾಡುತ್ತಾ ನಿಂತಿದ್ದ ಪಾರ್ವತಜ್ಜಿಯು ಎದೆನೋವು ಬಂದು ಪ್ರಜ್ಞೆತಪ್ಪಿ ಬಿದ್ದುಬಿಟ್ಟಳು. ಪಾರ್ವತಜ್ಜಿಯನ್ನು ಪಕ್ಕದ ಊರಿನ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ಅಲ್ಲಿ ವೈದ್ಯರು ಇ.ಸಿ.ಜಿ. ಮಾಡಿ ಪರಿಶೀಲಿಸಿ ಹೃದಯಾಘಾತವಾಗಿದೆ ಎಂದು ತಿಳಿಸಿದರು. ಅಲ್ಲಿ ಪ್ರಥಮ ಚಿಕಿತ್ಸೆಯ ಔಷಧಿಗಳನ್ನು ಕೊಟ್ಟು ಬೇಗ ಬೆಂಗಳೂರಿಗೆ ಕರೆದುಕೊಂಡು ಹೋಗಿ ಹೆಚ್ಚಿನ ಚಿಕಿತ್ಸೆ ಮಾಡಿಸಲು ಹೇಳಿದರು. ಆದರೆ ಪಾರ್ವತಮ್ಮನನ್ನು ಮಕ್ಕಳು ಆಸ್ಪತ್ರೆಯಿಂದ ಬೆಂಗಳೂರಿಗೆ ಕರೆದುಕೊಂಡು ಹೋಗದೆ ಮನೆಗೆ ಕರೆದುಕೊಂಡು ಬಂದು,